ದಿನಾಂಕ: ಫೆಬ್ರವರಿ ೦೯,೨೦೧೪

<u>ಕಳೆದ ಒಂದು ದಶಕದಲ್ಲಿ ಕಾಂಗ್ರೆಸ್ ಪಕ್ಷ ಹೇಗೆ ಸಿಬಿಐನ ದುರುಪಯೋಗ ಪಡೆಸಿಕೊಂಡಿತು</u>

–ಅರುಣ್ ಜೇಟ್ಲಿ

ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ನಿನ್ನೆ, ಎಕನಾಮಿಕ್ಸ್ ಟೈಮ್ಸ್ ಪತ್ರಿಕೆಯಲ್ಲಿ ಸಿಬಿಐ ನಿರ್ದೇಶಕರಾದ ಶ್ರೀ ರಂಜನ್ ಸಿನ್ಹಾ ಅವರ ಹೇಳಿಕೆಯೊಂದು ಪ್ರಕಟವಾಗಿತ್ತು. ಸತ್ಯ ಹೊರ ಜಾರಿದೆ. ಇಶ್ರತ್ ಜೆಹಾನ್ ಪ್ರಕರಣದಲ್ಲಿ ಅಮಿತ್ ಶಾ ಅವರ ವಿರುದ್ಧ ಆರೋಪ ಪಟ್ಟಿ ದರ್ಜಾಗಿದ್ದರೆ ಯುಪಿಎಗೆ ಸಂತೋಷವಾಗುತ್ತಿತ್ತು ಎಂದು ಅವರು ಹೇಳಿದ್ದಾರೆ. ಅಮಿತ್ ಶಾ ಅವರ ವಿರುದ್ಧ ಯಾವುದೇ ಪುರಾವೆಗಳು ದೊರೆಯಲಿಲ್ಲ ಎಂದೂ ಸಹ ಅವರು ಒಪ್ಪಿಕೊಂಡಿದ್ದಾರೆ. ಸರ್ಕಾರದ ವಿರುದ್ಧ ಅವರ ಹೇಳಿಕೆಯಿಂದ ವ್ಯಾಪಕ ಟೀಕೆಗಳು ಕೇಳಿಬರುವ ಸಾಧ್ಯತೆಯಿಂದ, ನಂತರ ಸಿಬಿಐ ನಿರ್ದೇಶಕರು ತಮ್ಮ ಹೇಳಿಕೆಯನ್ನು ತಿರುಚಲಾಗಿದೆ ಎಂಬ ನಿರರ್ಥಕ ಸ್ಪಷ್ಟನೆ ನೀಡಿದ್ದಾರೆ. ಸಿಬಿಐ ನಿರ್ದೇಶಕರ ಹೇಳಿಕೆ ಮತ್ತು ಸ್ಪಷ್ಟನೆಯ ಹೊರತಾಗಿಯೂ ಯುಪಿಎ ಸರ್ಕಾರದ ಅವಧಿ ಮುಕ್ತಾಯದ ಈ ಹಂತದಲ್ಲಿ ಸಿಬಿಐ ಸಂಸ್ಥೆಯ ದುರುಪಯೋಗ ಪ್ರಕ್ರಿಯೆಯನ್ನು ಪರಿಶೀಲಿಸುವುದು ಹೆಚ್ಚು ಸೂಕ್ತವೆನಿಸಿದೆ.

ಪೋಲಿಸ್ ಹಾಗೂ ತನಿಖಾ ಸಂಸ್ಥೆಗಳನ್ನು ಬಳಸಿ ಸುಳ್ಳು ಸಾಕ್ಷ್ಯಾಧಾರಗಳ ಆಧಾರದ ಮೇಲೆ ಪ್ರಕರಣ ದಾಖಲಿಸುವ ಪರಿಪಾಠವಿದೆ. ತುರ್ತುಕಾಲದಲ್ಲಿ ರಾಜಕೀಯ ಕಾರ್ಯಕರ್ತರ ವಿರುದ್ಧ ಸುಮಾರು ಎರಡು ಲಕ್ಷ ಎಫ್ಐಆರ್ ಸುಳ್ಳು ಸಾಕ್ಷಾಧಾರಗಳ ಆಧಾರದ ಮೇಲೆ ಹೇರಲಾಗಿತ್ತು. ಆಂತರಿಕ ಭದ್ರತಾ ಕಾಯಿದೆ(ಮೀಸಾ) ಹಾಗೂ ತುರ್ತುಕಾಲದಲ್ಲಿ ಅನ್ವಯವಾಗುವ ಭಾರತದ ರಕ್ಷಣೆ ನಿಯಮಗಳ ಅಡಿ ಮುಂಜಾಗ್ರುತ ಬಂಧನದಲ್ಲಿದ್ದವರನ್ನು ಸೆರೆವಾಸಕ್ಕೆ ಕಳಿಸುವುದು ಸಾಮಾನ್ಯವಾಗಿತ್ತು. ಪೋಲಿಸರು ದಾಖಲಿಸುತ್ತಿದ್ದ ಹಲವಾರು ಎಪ್ಐಅರ್‌ಗಳು ಒಂದೇ ನಮೂನೆಯಾಗಿದ್ದವು. ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯಲು ಹಗಲಿನಲ್ಲಿ ಹಾಲು ಕೇಂದ್ರ ಅಥವಾ ಬಸ್ ನಿಲ್ದಾಣಗಳಲ್ಲಿ ಭಾಷಣ ಮಾಡುತ್ತಿದ್ದರು ಎಂಬ ಆರೋಪದ ಮೇಲೆ ವಿಪಕ್ಷಗಳ ರಾಜಕೀಯ ಕಾರ್ಯಕರ್ತರನ್ನು ಬಂಧಿಸಲಾಗುತ್ತಿತ್ತು. ಬಂಧನಕ್ಕೆ ಬೇರೆ ಪುರಾವೆ ಬೇಕಾಗಿರಲಿಲ್ಲ. ವಿಷಾದಕರ ಸಂಗತಿಯೆಂದರೆ, ಸುಳ್ಳು ಎಪ್ಐಆರ್ ಹೂಡುವುದಿಲ್ಲ ಅಥವಾ ನಿರಪರಾಧಿಯನ್ನು ಶಿಕ್ಷೆಗೆ ಗುರಿಪಡಿಸಲು ಒಪ್ಪುವುದಿಲ್ಲವೆಂದು ವಿದ್ರೋಹ ಮಾಡಿದ ಒಬ್ಬನೆ ಒಬ್ಬ ಪೋಲಿಸ್ ಅಧಿಕಾರಿಯನ್ನು ನಾವು ಕಾಣಲಿಲ್ಲ. ತುರ್ತುಕಾಲದ ಕೃತ್ಯಗಳಿಗೆ ಸಹಕರಿಸಿ ಪಾಲುದಾರರಾದರು.

೨೦೦೪ರಿಂದ೨೦೧೪ರ ವರೆಗೂ ತನ್ನ ಆಳ್ವಿಕೆ ಅವಧಿಯಲ್ಲಿ ಯುಪಿಎ ಸರ್ಕಾರ ಸಿಬಿಐ ತನಿಖಾ ಸಂಸ್ಥೆಯ ದುರುಪಯೋಗ ಮಾಡಿಕೊಳ್ಳುವಲ್ಲಿ ಪಾಂಡಿತ್ಯ ಸಾಧಿಸಿದೆ. ಸರ್ಕಾರದ ನಿಯಂತ್ರಣದಲ್ಲಿ ತನಿಖಾ ಸಂಸ್ಥೆ ಇರಲಿಲ್ಲ. ಬದಲಾಗಿ ಸ್ವತಃ ಆಡಳಿತ ಪಕ್ಷವೇ ಸಂಸ್ಥೆಯನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡ ಕೆಟ್ಟ ಪರಿಸ್ಥಿತಿ ಉದ್ಭವಿಸಿದೆ. ಸಿಬಿಐ ನಿರ್ದೇಶಕರಾಗಿ ಮೆದು ಸ್ವಭಾವದ ವ್ಯಕ್ತಿಯನ್ನು ಆಯ್ಕೆ ಮಾಡಲಾಗುತ್ತದೆ. ನಿರ್ದೇಶಕರ ನಿರ್ದೇಶನದ ಮೇಲೆ ಸಿಬಿಐ ಕಾರ್ಯವಹಿಸುತ್ತದೆ. ಆತನ ಮಾತೆ ಅಂತಿಮ. ತನಿಖಾ ಅಧಿಕಾರಿ ತನಿಖಾ ಕಡತ ಸಿದ್ಧ ಪಡಿಸುವಾಗ, ಒಬ್ಬ ವ್ಯಕ್ತಿಯ ಮೇಲೆ ದೋಷಾರೋಪ ಹೊರಿಸುವ ಅಥವಾ ಆರೋಪ ಪಟ್ಟಿಯಿಂದ ಅವನ ಹೆಸರನ್ನು ತೆಗೆಯುವ ನೈಪುಣ್ಯತೆಯನ್ನು ಅನುಸರಿಸಲಾಗುತ್ತಿದೆ. ಆಂತರಿಕ ಪರಿಶೀಲನೆ ಮತ್ತು ಸಮತೋಲಿತ ದೃಷ್ಟಿಕೋನ ಸಂಪೂರ್ಣ ಕುಸಿದುಬಿದ್ದಿದೆ. ನಿರ್ದೇಶಕರು ನಿವೃತ್ತರಾದ ಬಳಿಕವೂ ಸರ್ಕಾರ ಅವರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುತ್ತದೆ. ನಿವೃತ್ತಿ ನಂತರದ ಉದ್ಯೋಗಾವಕಾಶ

ನೀಡುವ ಭರವಸೆ ನೀಡಲಾಗುತ್ತದೆ. ಇದರಿಂದ ಅವರು ಸರ್ಕಾರಕ್ಕೆ ವಿಧೇಯರಾಗಿ ಮತ್ತಷ್ಟು ಕಾರ್ಯವಹಿಸುವ ಪ್ರತಿಕೂಲ ವಾತಾವರಣ ಸೃಷ್ಟಿಯಾಗುತ್ತದೆ. ರಾಜ್ಯಪಾಲರ ಹುದ್ದೆಯಿಂದ ಆರಂಭಗೊಂಡು ಯುಪಿಎಸ್‌ಸಿ ಸದಸ್ಯತ್ವದವರೆಗೂ ಆಕರ್ಷಕ ಉದ್ಯೋಗಾವಕಾಶಗಳ ಆಮಿಷವನ್ನು ಸರ್ಕಾರ ನಿವೃತ್ತಿಯ ನಂತರ ನೀಡುವ ಆಮಿಷವನ್ನು ನಿರ್ದೇಶಕರಿಗೆ ನೀಡುತ್ತ ಬಂದಿದೆ. ಇಶ್ರತ್ ಜಹಾನ್ ಪ್ರಕರಣದಲ್ಲಿ ಅಮಿತ್ ಶಾ ಅವರ ವಿರುದ್ಧ ಸುಳ್ಳು ಆರೋಪ ಹೊರೆಸುವಲ್ಲಿ ವಿಶೇಷ ಅಸಕ್ತಿ ವಹಿಸಿದ್ದ ಮತ್ತು ಇತ್ತೀಚೆಗೆ ನಿವೃತ್ತರಾದ ವಿಶೇಷ ನಿರ್ದೇಶಕರೊಬ್ಬರನ್ನು ನಿವೃತ್ತಿ ಆಗುವ ಮುನ್ನವೇ ಜಾಮಿಯ ಮಿಲಿಯ ಇಸ್ಲಾಮಿಯ ವಿಶ್ವವಿದ್ಯಾಲಯದ ಕುಲಪತಿಯಾಗಿ ನೇಮಿಸಲಾಗಿತ್ತು. ಪತ್ರಿಕಾ ವರದಿಗಳ ಪ್ರಕಾರ ಅವರನ್ನು ಸಿವಿಸಿ ವಿಚಕ್ಷಣಾ ಆಯುಕ್ತರಾಗಿಯೂ ನೇಮಿಸಲು ಸರ್ಕಾರ ತುದಿಗಾಲಲ್ಲಿ ನಿಂತಿದೆ.

ಭಾಜಪ ಹಿರಿಯ ನಾಯಕರಾದ ಅಮಿತ್ ಶಾ, ಗುಲಾಬ್ ಚಂದ್ ಕಟಾರಿಯ ಹಾಗೂ ರಾಜೇಂದ್ರ ರಾಥೋಡ್ ಅವರ ವಿರುದ್ಧ ಸಿಬಿಐ ಸುಳ್ಳು ಪ್ರಕರಣಗಳನ್ನು ದಾಖಲಿಸುವ ಪರಿಪಾಠ ಬೆಳೆಸಿಕೊಂಡಿದೆ ಎಂದು ಸುವಿಸ್ತಾರವಾಗಿ ಕಾರಣಗಳ ಸಮೇತ ವಿವರವಾದ ಪತ್ರವನ್ನು ನಾನು ಪ್ರಧಾನಮಂತ್ರಿಗಳಿಗೆ ಬರೆದಿದ್ದೆ. ಅಮಿತ್ ಶಾ ಪ್ರಕರಣದಲ್ಲಿ ಉಚ್ಚ ನ್ಯಾಯಾಲಯ ಅವರಿಗೆ ಜಾಮೀನು ನೀಡುವ ಸಂದರ್ಭದಲ್ಲಿ, ಪ್ರಕರಣ ದಾಖಲಿಸುವ ಯಾವುದೇ ಬಲವಾದ ಸಾಕ್ಷ್ಯಾಧಾರಗಳು ಲಭ್ಯವಿಲ್ಲ ಎಂಬ ಅಭಿಪ್ರಾಯ ನೀಡಿತ್ತು. ಗುಲಾಬ್ ಚಂದ್ ಕಟಾರಿಯ ಅವರ ವಿರುದ್ಧ ಹೇರಲಾದ ಆರೋಪಗಳು ಸತ್ಯಕ್ಕೆ ದೂರವಾದದ್ದು ಎಂದು ಸ್ಪಷ್ಟವಾದ ಕಾರಣ ವಿಶೇಷ ನ್ಯಾಯಾಧೀಶರು ಅವರಿಗೆ ನಿರೀಕ್ಷಣಾ ಜಾಮೀನು ನೀಡಿದರು. ರಾಜೆಂದರ್ ರಾಥೋಡ್ ಅವರ ಪ್ರಕರಣದಲ್ಲಿ ಆರೋಪ ಹೊರಿಸುವ ಹಂತದಲ್ಲೇ ವಿಶೇಷ ನ್ಯಾಯಾಧೀಶರು ಅವರನ್ನು ಮುಕ್ತಗೊಳಿಸಿದ್ದರು. ಅಲ್ಪ ಬಹುಮತದ ಯುಪಿಎ ಸರ್ಕಾರ ಅಧಿಕಾರದಲ್ಲಿ ಉಳಿಯಲು ಸಮಾಜವಾದಿ ಹಾಗೂ ಬಿಎಸ್‌ಪಿ ಬಾಹಿರ ಬೆಂಬಲವೇ ಕಾರಣ. ಈ ಎರಡೂ ಪಕ್ಷಗಳ ಬೆಂಬಲ ದೊರೆಯಲು ಸಿಬಿಐ ಸಹಕಾರ ಸರ್ಕಾರಕ್ಕಿತ್ತು. ಬಲ್ಲಮೂಲಗಳಿಗಿಂತ ಹೆಚ್ಚಿನ ಆಸ್ತಿ ಹೊಂದಿದ ಆರೋಪಗಳನ್ನು ಈ ಪಕ್ಷದ ನಾಯಕರು ಎದುರಿಸುತ್ತಿದ್ದಾರೆ.

ಎಕನೋಮಿಕ್ ಟೈಮ್ಸ್ ಪತ್ರಿಕೆಗೆ ಸಿಬಿಐ ನಿರ್ದೇಶಕರು ನೀಡಿದ ಹೇಳಿಕೆಯನ್ನು ನಂತರ ಅಲ್ಲಗೆಳೆದ ಬೆಳವಣಿಗೆ ಅಪ್ರಸ್ತುತ. ಅವರ ನಿರಾಕರಣೆಯ ಹೊರತಾಗಿಯೂ, ಸಿಬಿಐ ಸರ್ಕಾರದ ಇಚ್ಛೆಯಂತೆ ವರ್ತಿಸುತ್ತಿದೆ ಎಂಬುದಕ್ಕೆ ವ್ಯಾಪಕ ಸಾಕ್ಷ್ಯಾಧಾರಗಳು ಲಭ್ಯವಿವೆ.

*****